ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 6, January-February 2026, Pp. 65-69
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಕನ್ನಡ ಸಾಹಿತ್ಯದಲ್ಲಿ ಕರ್ನಾಟಕದ ಸಂಸ್ಕೃತಿ

**ಡಾ. ತಿಪ್ಪೇಸ್ವಾಮಿ ಡಿ. ಎಸ್**
ಸಹ ಪ್ರಾಧ್ಯಾಪಕರು, ವಿ.ಎಂ.ಕೆ.ಎಸ್.ಆರ್. ವಸ್ತ್ರದ ಕಲಾ, ವಿಜ್ಞಾನ ಹಾಗೂ ವಿ.ಎಸ್. ಬೆಳ್ಳಿಹಾಳ ವಾಣಿಜ್ಯ ಮಹಾವಿದ್ಯಾಲಯ, ಹುನಗುಂದ

**Abstract:**
*ಕನ್ನಡ ಸಾಹಿತ್ಯವು ಕರ್ನಾಟಕದ ಸಮೃದ್ಧ ಸಂಸ್ಕೃತಿಯನ್ನು ಹೇಗೆ ಪ್ರತಿಬಿಂಬಿಸುತ್ತದೆ ಎಂಬುದವನ್ನು ಈ ಲೇಖನದಲ್ಲಿ ವಿವರಿಸಲಾಗಿದೆ. ಸಾಹಿತ್ಯ ಮತ್ತು ಸಂಸ್ಕೃತಿ ಪರಸ್ಪರ ಸಂಬಂಧ ಹೊಂದಿದ್ದು ಒಂದರ ಬೆಳವಣಿಗೆ ಮತ್ತೊಂದರ ಮೇಲೆ ಅವಲಂಬಿತವಾಗಿದೆ. ಕರ್ನಾಟಕ ಸಂಸ್ಕೃತಿ ವೈವಿಧ್ಯಮಯವಾಗಿದೆ ವಿವಿಧ ಭಾಷೆಗಳು ಆಚರಣೆಗಳು, ಧರ್ಮಗಳು, ಕಲಾ ರೂಪಗಳು ಮತ್ತು ಜನಪದ ಪರಂಪರೆಗಳು ಎಲ್ಲಾ ಕಂಡು ಬರುತ್ತವೆ. ಈ ವೈವಿಧ್ಯತೆಯನ್ನು ಕನ್ನಡ ಸಾಹಿತ್ಯವು ತನ್ನೊಳಗೆ ಒಳಗೊಂಡಿದೆ ಎಂಬುವುದು ಸಂಸ್ಕೃತಿಯ ಪ್ರತಿಬಿಂಬಿತವಾಗಿದೆ.*

**Keywords:** *ಕನ್ನಡ ಸಾಹಿತ್ಯ, ಸಂಸ್ಕೃತಿ, ಸಂಗೀತ, ಜಾನಪದ ಸಂಸ್ಕೃತಿ, ಯಕ್ಷಗಾನ, ಬಯಲಾಟ.*

## ಪೀಠಿಕೆ

ಕರ್ನಾಟಕ ಸಂಸ್ಕೃತಿ ಭಾರತ ಸಂಸ್ಕೃತಿಯಿಂದ ವಿಭಿನ್ನವಲ್ಲ. ಕರ್ನಾಟಕದ ದೀರ್ಘಕಾಲದ ಇತಿಹಾಸ ಇದನ್ನು ಚೆನ್ನಾಗಿ ಸ್ಪಷ್ಟಪಡಿಸಿದೆ. ಭರತಖಂಡದ ರಾಜಕೀಯ ಸಾಮಾಜಿಕ ಸಾಂಸ್ಕೃತಿಕ ಭೂಪಟದಲ್ಲಿ ಕರ್ನಾಟಕ ವಿಶಿಷ್ಟ ಸ್ಥಾನ ಪಡೆದಿದೆ. ಕ್ರಿ.ಶ.ಎರಡನೇಯ ಶತಮಾನದಲ್ಲೇ ಕರ್ನಾಟಕದ ಕೀರ್ತಿ ಸಾಗರಗಳಾಚೆಯೂ ಹಬ್ಬಿತ್ತು. ಬಂಗಾಳ, ನೇಪಾಳ ಪ್ರಾಂತಗಳ ಮೇಲೂ ಎಷ್ಟೋ ಶತಮಾನಗಳ ಹಿಂದೆ ಇದರ ಪ್ರಭಾವ ಆಗಿತ್ತು. 1097 ರಲ್ಲೇ ಗಂಗರ ನಾನ್ಯದೇವ ನೇಪಾಳದ ರಾಜವಂಶಸ್ಥಾಪಕನಾದ. ಬಂಗಾಳದಲ್ಲಿ ಸಮಂತಸೇನ, ಲಕ್ಷ್ಮಣಸೇನ ಮೊದಲಾದ ಕನ್ನಡ ರಾಜರ ಹೆಸರುಗಳು ಶಾಸನೋಕ್ತವಾಗಿವೆ. ಆ ವೇಳೆಗೆ ಉತ್ತರದಲ್ಲಿ ಕಾಶ್ಮೀರ, ಪಶ್ಚಿಮದಲ್ಲಿ ಗುಜರಾತಿನವರೆಗೂ ಕನ್ನಡ ಸಂಸ್ಕೃತಿ ತನ್ನ ವರ್ಚಸ್ಸನ್ನು ಬೀರಿತ್ತು. ರಾಷ್ಟ್ರಕೂಟ ದೊರೆಗಳೂ ಕನೂಜ್–ಸಿಲೋನ್‌ಗಳನ್ನು ವಶಪಡಿಸಿಕೊಂಡಿದ್ದರು. ವಿಜಯನಗರದ ಪ್ರಸಿದ್ಧಿ ಯುರೋಪನಲ್ಲೂ ಹರಡಿತ್ತು. ಈ ಹಿನ್ನಲೆಯಲ್ಲಿ ಐತಿಹಾಸಿಕವಾಗಿ ಕನ್ನಡ ನಾಡು ಹಿಂದೆ ಬಹುದೊಡ್ಡ ರಾಜ್ಯವಾಗಿತ್ತು. ಈಚೆಗೆ 1956 ರಲ್ಲಿ ಭಾಷಾವಾರು ಪ್ರಾಂತಗಳಾದಾಗ 'ನವಕರ್ನಾಟಕ' ವೆಂಬುದೇನೋ ಹೊಸದಾಗಿ ಉದಿಯಿಸಿತಾದರೂ ಅದು ಈಗ ಇದ್ದಕ್ಕಿದ್ದಂತೆ ಹಾಗಾದುದಲ್ಲ. ಹಿಂದೆ ಹಿರಿಯ ಚಕ್ರವರ್ತಿಗಳ ನೇತೃತ್ವದಲ್ಲಿ ದೊಡ್ಡ ಬಾಳನ್ನು ಬೆಳಗಿರುವ ದೇಶವಿದ್ದು. ರಾಜಕೀಯವಾಗಿ ದೊಡ್ಡ ರಾಜ್ಯವಾಗಿದ್ದ ಈ ನಾಡು ದೊಡ್ಡ ಸಂಸ್ಕೃತಿಯನ್ನು ಕಟ್ಟಿ ಬೆಳೆಸಿಕೊಂಡು ಬಂದಿದೆ.

ನಮ್ಮ ಕರ್ನಾಟಕದ ಜನರು ಸಂಪ್ರದಾಯವುಳ್ಳವರು, ಸುಶೀಲರು, ಸಹನಶೀಲರು,

***Please cite this article as:*** ತಿಪ್ಪೇಸ್ವಾಮಿ ಡಿ. ಎಸ್. (2026). ಕನ್ನಡ ಸಾಹಿತ್ಯದಲ್ಲಿ ಕರ್ನಾಟಕದ ಸಂಸ್ಕೃತಿ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 4(6), 65–69

ಸುಸಂಸ್ಕೃತರು ಎಂದು ಪ್ರಸಿದ್ಧರಾಗಿದ್ದಾರೆ, ಜನಜೀವನ ಧರ್ಮ–ನಂಬಿಕೆ, ಸಿದ್ಧಾಂತ, ನೀತಿ ಧರ್ಮ, ಸಾಮಾಜಿಕ, ಧಾರ್ಮಿಕ, ಆರ್ಥಿಕ ಎಂಬ ಸಂಸ್ಕೃತಿಯ ಹಲವು ಭೂಮಿಕೆಗಳಲ್ಲಿ ಕರ್ನಾಟಕ ತನ್ನ ಪಾತ್ರವನ್ನು ಪರಿಷ್ಕಾರವಾಗಿ ನಿರ್ವಹಿಸಿ ಪ್ರತಿಯೊಂದರ ಸಾಧನೆಯಲ್ಲಿಯೂ ಸಾಧಿಸಿದೆ. ಶಿಲ್ಪಕಲೆಗಳಲ್ಲಿ, ವಾಸ್ತುಶಿಲ್ಪಗಳಲ್ಲಿ, ಸಂಗೀತದಲ್ಲಿ, ತತ್ವಜ್ಞಾನಗಳಲ್ಲಿ, ಶಾಸ್ತ್ರಗಳಲ್ಲಿ, ಮುಂತಾದ ವಲಯಗಳಲ್ಲಿ ಭರತಖಂಡದ ಕಲ್ಯಾಣಕ್ಕೆ ಕೀರ್ತಿಗೆ ನಮ್ಮ ಕರ್ನಾಟಕ ಸಲ್ಲಿಸಿದ ಕಾಣಿಕೆ ಅಮೋಘವಾಗಿದೆ.

ಕರ್ನಾಟಕ ಸಂಸ್ಕೃತಿಯನ್ನು ಇತಿಹಾಸದ ಬೆಳವಣಿಗೆಯಲ್ಲಿ ನೋಡುವುದಾದರೆ ಶಾಸನಗಳಲ್ಲಿ, ಸಾಹಿತ್ಯದಲ್ಲಿ, ವಾಸ್ತುಶಿಲ್ಪಗಳಲ್ಲಿ, ಲಲಿತಕಲೆಗಳಲ್ಲಿ ಹರಡಿಕೊಂಡಿವೆ. ವೀರಪುರುಷರ ಸಾಹಸಜೀವನ ಒಂದು ಕತೆಯಾಗಿದೆ. ಧರ್ಮ ಸಂಸ್ಕೃತಿಗಳ ಸಂವರ್ಧನೆಗೆ ಅವರು ಹೇಗೆ ಹೋರಾಡಿದ್ದರು. ಅದನ್ನು ಹೇಗೆ ಸಾಧಿಸಿದರು ಎಂಬುದು ಸ್ಪಷ್ಟವಾಗಿ ಕಾಣುತ್ತದೆ. ಒಡೆದು ವಿಭಾಗ ಮಾಡಿ ಆಳುವುದಕ್ಕಿಂತ ಜನರನ್ನು ಒಟ್ಟುಗೂಡಿಸಿ ಬಾಳುವ ಪ್ರಯತ್ನ ನಡೆಸಿದ ಸಾಮಂತರೊಂದಿಗೆ ಸಾಮರಸ್ಯದಿಂದಿದ್ದ ಸಾಮ್ರಾಟರು ಬದುಕಿನ ನಾಡು ಕರ್ನಾಟಕ ಸಂಸ್ಕೃತಿ ಎಂಬುದು ತಿಳಿಯುತ್ತದೆ. ಇದು ಅವರ ಮಹೌದಾರ್ಯ–ಮಹಾಸಂಸ್ಕೃತಿಗಳ ದ್ಯೋತಕವಾಗಿದೆ. ಸಂಪ್ರದಾಯ ಪೋಷಣೆಗಾಗಿ ನಡೆದ ಪೌರುಷ ಪ್ರಯತ್ನಗಳ ರೂಪದ ಕರ್ನಾಟಕ ಸಂಸ್ಕೃತಿ ಸತ್ವಯುತವಾದ ಸನಾತನ ವೃಕ್ಷವೆನ್ನಬಹುದು. ಅದರ ಬೇರು ನೆಲದಲ್ಲಿ ಚೆನ್ನಾಗಿ ವ್ಯಾಪಿಸಿ, ಅದು ಬಲಿತು ಹೂ–ಹಣ್ಣುಗಳನ್ನು ನೀಡಿದೆ. ಸಮನ್ವಯ ಸಹನೆ– ಸಹಿಷ್ಣುತೆ ಸಾಮರಸ್ಯಗಳೇ ಆ ಸಂಸ್ಕೃತಿಯ ವೈಶಿಷ್ಟ್ಯಗಳು. ಆಳಿದವರು, ಆಡಳಿತಗಾರರು, ಉದಾರಿಗಳಾಗಿದ್ದರು. ತಮ್ಮ ತಮ್ಮ ಜಾತಿ ಮತಧರ್ಮಗಳನ್ನು ಪೋಷಿಸಿ ಪ್ರೋತ್ಸಾಹಿಸಿದರು. ಅಂಧರಾಗಿ ಕ್ರೂರರಾಗಿರಲಿಲ್ಲ. ಪರಾಕ್ರಮಕ್ಕೆ ಇತಿಹಾಸದಲ್ಲಿಯೇ ದೊರೆಗಳ ಹೆಸರು ಪ್ರಸಿದ್ಧವಾಗಿದೆ. ಕದಂಬರ ಮಯೂರ ವರ್ಮ, ಚಾಲುಕ್ಯರ ಪುಲಕೇಶಿ, ರಾಷ್ಟ್ರ ಕೂಟರ ಧ್ರುವ, ಗೋವಿಂದ, ಇಂದ್ರ, ಆರನೆಯ ವಿಕ್ರಮ, ಹೊಯ್ಸಳರ ವಿಷ್ಣುವರ್ಧನ, ಇಮ್ಮಡಿ ಬಲ್ಲಾಳರಾಯ, ವಿಜಯ ನಗರದ ಪ್ರೌಢದೇವರಾಯ, ಕೃಷ್ಣದೇವರಾಯ, ಮೈಸೂರಿನ ರಾಜ ಒಡೆಯರು, ಚಿಕ್ಕದೇವರಾಜ ಒಡೆಯರು ಮುಂತಾದವರು ದೇಶವನ್ನು ಮೇಲೆತ್ತುವ ಶೌರ್ಯೌದಾರ್ಯಗಳುಳ್ಳವರಾಗಿದ್ದರೇ ಹೊರತು ಕೇವಲ ಪಾಶವೀ ವೀರರಾಗಿರಲಿಲ್ಲ, ವೀರೋದಾತ್ತರಾಗಿದ್ದರು. ಕ್ಷಮಾಗುಣಸಂಪನ್ನರಾಗಿದ್ದರು. ಪ್ರಜಾರಂಜನೆಯೆಂಬ ರಾಜನ ಪ್ರಮುಖ ಲಕ್ಷಣವನ್ನು ಪಡೆದವರಾಗಿದ್ದರು.

ವಾಸ್ತುಶಿಲ್ಪ, ಮೂರ್ತಿಶಿಲ್ಪ, ಸಂಗೀತ, ನೃತ್ಯ, ಚಿತ್ರ ಎಂಬ ಲಲಿತ ಕಲೆಗಳ ಅವಿರ್ಭಾವದಲ್ಲೂ ಕರ್ನಾಟಕ ತನ್ನದೇ ಆದ ವೈಶಿಷ್ಟವನ್ನು ಪಡೆದಿದೆ. ಚಾಲುಕ್ಯ ಶಿಲ್ಪ, ಹೊಯ್ಸಳ ಶಿಲ್ಪ– ವಿಜಯನಗರ ಶಿಲ್ಪಗಳು ದೇಶದ ಶಿಲ್ಪಚರಿತ್ರೆಯಲ್ಲಿ ಪ್ರಮುಖ ವಿಭಾಗಗಳಾಗಿವೆ. ಬೇಲೂರು ಚೆನ್ನಕೇಶವ ದೇವಾಲಯ, ಶ್ರವಣಬೆಳಗೊಳದ ಗೊಮ್ಮಟ ವಿಗ್ರಹ, ಅಜಂತ ಎಲ್ಲೋರ, ಎಲಿಫೆಂಟ ಗುಹೆಗಳು ಕನ್ನಡ ಸಂಸ್ಕೃತಿಯ ಮಹೋನ್ನತ ಪ್ರತೀಕಗಳಾಗಿವೆ. ಕರ್ನಾಟಕ ಸಂಗೀತವೆಂಬ ದಕ್ಷಿಣ ಭಾರತದ ಸಂಗೀತಕ್ಕೆ ಈಗಲೂ ಹೆಸರು ಇದೆ. ಕಲೆಕಾರರು, ಸಂಗೀತಗಾರರು, ಕೆತ್ತನೆಯ ಕೆಲಸ ಬಣ್ಣದ ಕೆಲಸಗಳು ಕರ್ನಾಟಕದಲ್ಲಿ ಇಂದಿಗೂ ಜೀವಂತವಾಗಿವೆ. ರಂಗವಲ್ಲಿ ಬಿಡಿಸುವ ಕಲೆಯಂತೂ ಕನ್ನಡ ನಾಡಿನಲ್ಲಿ ವಿಶಿಷ್ಟವಾಗಿಯೇ ಇದ್ದಿತು. ಹರಿದಾಸ ಚತುಷ್ಟಯರಲ್ಲಿ ಒಬ್ಬರೆಂದು ಪ್ರಸಿದ್ಧರಾದ ಶ್ರೀ ಜಗನ್ನಾಥದಾಸರನ್ನು ಅವರ ರಂಗವಲ್ಲೀ ಕಲಾಪರಿಣತಿಗಾಗಿ 'ರಂಗೋಲಿದಾಸರು' ಎಂದೇ ಕರೆಯಲಾಗಿದೆ. ಪೂರ್ಣಯ್ಯನವರ ಮನೆಯಲ್ಲಿ ಅವರು ಬಿಡಿಸಿದ ಶ್ರೀರಂಗದ ರಂಗನಾಥಸ್ವಾಮಿಯ ಚಿತ್ರದ ಕಲೆ ಪ್ರಸಿದ್ಧವಾಗಿದೆ. ಅವರ ಈ ಪರಿಣತ ಚಿತ್ರಕಲೆಯ ಸ್ಮಾರಕ ಇಂದಿಗೂ ಮಾನ್ವಿಯಲ್ಲಿ ಕಾಣಬಹುದು.

ಕರ್ನಾಟಕದ ಆಡಳಿತ ಬಹುಮಟ್ಟಿಗೆ ಎಲ್ಲ ಅರಸರಿಂದಲೂ ಧರ್ಮಶಾಸ್ತ್ರದ ಆಧಾರದಿಂದಲೇ

ನಡೆಯುತ್ತಿದ್ದಿತು. ರಾಜಶಕ್ತಿ ಧರ್ಮಶಕ್ತಿಗೆ ಅಧೀನವಾಗಿ, ಅನುಗುಣವಾಗಿದಿತ್ತು. ಸಾವಿರಾರು ದಾನ ಶಾಸನಗಳು, ದೇವಾಲಯಗಳು ನಮ್ಮ ಹಿಂದಿನ ಅರಸರ ಶ್ರೀಮಂತರ ಉದಾರ ದೃಷ್ಟಿಯ ದ್ಯೋತಕಗಳಾಗಿವೆ. ಅರಸರ, ಅರಸಿಯರು, ಸಾಮಂತರು, ಶ್ರೀಮಂತರು, ಸಚಿವರು, ಸೇನಾಪತಿಗಳು, ಪರಿವಾರದವರು, ಪ್ರಜಾಸಾಮಾನ್ಯರು ಕೂಡ, ದಾನಕೊಟ್ಟು ದತ್ತಿ ಬಿಟ್ಟು, ಶಾಲೆ ನಡೆಸಿ, ಕೆರೆಕಟ್ಟಿಸಿ, ಭಾವಿ ತೋಡಿಸಿದ ಸಾಂಸ್ಕೃತಿಕ ಸಮಾಜ ಕಲ್ಯಾಣಕಾರಕ ಕಾರ್ಯಗಳು ಶಾಸನೋಕ್ತವಾಗಿವೆ.

ನಮ್ಮ ಕರ್ನಾಟಕದ ಜನಜೀವನವನ್ನು ಮೆರೆದು ತೋರುವ ಕನ್ನಡ ಜನಪದ ಸಾಹಿತ್ಯ ಮತ್ತು ಸಂಸ್ಕೃತಿ ಭಂಡಾರವಾಗಿವೆ. ಜನರ ರಸಿಕತೆ ಅಲ್ಲಿ ಎದ್ದು ಕಾಣುತ್ತದೆ. ಯಕ್ಷಗಾನ, ಬಯಲಾಟ, ತೊಗಲುಗೊಂಬೆಯಾಟ, ಸುಗ್ಗಿಯ ಕುಣಿತ, ಸಂಪ್ರದಾಯ ಹಾಡುಗಳು, ಧಾರ್ಮಿಕ ಆಚರಣೆ ವಿಶಿಷ್ಟ ಸಂಪ್ರದಾಯಗಳು ಮುಂತಾದವು ಕನ್ನಡ ಸಂಸ್ಕೃತಿಯ ಪ್ರತೀಕವಾಗಿದೆ. ಅನೇಕ ಪ್ರಕಾರಗಳನ್ನೂ ಪಂಥಗಳನ್ನೂ ಉಳ್ಳ ಪ್ರೌಢ–ಸರಳ, ಉದಾತ್ತ ಸಾಹಿತ್ಯ ಸೃಷ್ಟಿ ಸಾವಿರ ವರ್ಷಗಳಿಗೂ ಹಿಂದಿನಿಂದ ಕನ್ನಡದಲ್ಲಿ ಆಗಿದೆ. ತಾತ್ವಿಕ ದಾರ್ಶನಿಕ ಜೀವನ ನಡೆಸಿದವರು ಹೊಸ ಸಿದ್ದಾಂತಗಳನ್ನು ಸ್ಥಾಪಿಸಿದ್ದಾರೆ. ಮಾಧ್ವಸಿದ್ಧಾಂತ ಪೂರ್ಣವಾಗಿ ಕನ್ನಡ ನೆಲದಲ್ಲಿ ಕನ್ನಡಿಗರಿಂದ ಸ್ಥಾಪಿತವಾದುದು. ಅಂತೆಯೇ ಅದ್ವೈತ ಸಿದ್ಧಾಂತ, ವಿಶಿಷ್ಟಾದ್ವೈತ ಸಿದ್ಧಾಂತಕ್ಕೆ ಆಶ್ರಯ ಸ್ಥಾನ ಕನ್ನಡ ನೆಲವಾಗಿತ್ತು. ಉನ್ನತ ಚಿಂತನ, ಸರಳ ಜೀವನ, ಉದಾತ್ತ ಜೀವನ, ನಡೆಸಿದವರು ಕನ್ನಡಿಗರು. ಇವರ ಬಾಳಿಗೆ ಸಾಹಿತ್ಯಕ್ಕೆ ಧರ್ಮ ಮುಖ್ಯ ಪ್ರೇರಕವಾಗಿದೆ. ಜನ ಜಾಗೃತಿಗಾಗಿ ಮೀಸಲಾಗಿದ್ದ ಸಾಹಿತ್ಯವೂ ಹೊರ ಹೊಮ್ಮಿದೆ. ಧಾರ್ಮಿಕ ಸಾಮಾಜಿಕ ಸಮಾನತೆಯನ್ನು ಕಾಯಕದ ಹಿರಿಮೆಯನ್ನು ಬೆಳಗಿದವರುಂಟು, ಶರಣರ ಸೂಳ್ನುಡಿ, ಹರಿದಾಸರ ಅಮೃತವಾಣಿ, ಕನ್ನಡದ ಕನ್ನಡಿಗರ ವೈಶಿಷ್ಟ್ಯ ಬೆಳವಣಿಗೆ ಎತ್ತರದಿಂದ ಕೆಳಗಿಳಿದು ಬಂದು ಮನೆಮನೆಗೂ ಮನಮನಕ್ಕೂ ಹರಿದು ಜನತೆಯನ್ನು ಪಾವನಗೊಳಿಸಿದೆ.

ಕನ್ನಡ ಸಾಹಿತ್ಯದಲ್ಲಿ ಕರ್ನಾಟಕದ ಸಂಸ್ಕೃತಿ ಸೊಗಸಾದ ಚಿತ್ರ ಹೀಗೆ ಶಾಸನಗಳಲ್ಲಿ, ಸಾಹಿತ್ಯದಲ್ಲಿ, ಇತರ ಐತಿಹಾಸಿಕ ಆಕರಗಳಲ್ಲಿ ಅಡಗಿದೆ. ಅದನ್ನು ವ್ಯಾಸಂಗ ಮಾಡಿ ನಮ್ಮ ಸಂಸ್ಕೃತಿಯ ಸುಂದರ ಚಿತ್ರವೊಂದನ್ನು ಹೃದಯಂಗಮವಾಗಿ ಬಿಡಿಸಿ ತೋರಿಸುವ ಪ್ರಯತ್ನ ಈ ಐವತ್ತು ವರ್ಷಗಳಲ್ಲಿ ಅನೇಕ ವಿದ್ವಾಂಸರಿಂದ ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳಲ್ಲಿ ನಡೆದಿದೆ. ಕೆಲವು ಸಾಂಸ್ಕೃತಿಕ ಸಂಸ್ಥೆಗಳೂ ಈ ಕಾರ್ಯವನ್ನು ಶ್ರದ್ಧೆಯಿಂದ ಮಾಡಿವೆ. ಇಂಥ ಸಂಸ್ಥೆಗಳಲ್ಲಿ ಧಾರವಾಡದ ಇತಿಹಾಸ ಸಂಶೋಧನ ಮಂಡಲ, ಕರ್ನಾಟಕ ವಿದ್ಯಾವರ್ಧಕ ಸಂಘ, ಕನ್ನಡ ಸಂಶೋಧನ ಸಂಸ್ಥೆಗಳು, ಬೆಂಗಳೂರಿನ ಮಿಥಿಕ್ ಸೊಸೈಟಿ ಮತ್ತು ಕನ್ನಡ ಸಾಹಿತ್ಯ ಪರಿಷತ್ತು, ಮೈಸೂರು ಸರ್ಕಾರದ ಪುರಾತತ್ವ ವಿಭಾಗ, ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆ ಹಾಗೂ ಮೈಸೂರು ವಿಶ್ವವಿದ್ಯಾಲಯ, ಕರ್ನಾಟಕ ವಿಶ್ವವಿದ್ಯಾಲಯ ಮತ್ತು ಹಂಪಿ ವಿಶ್ವವಿದ್ಯಾಲಯ ಇತ್ಯಾದಿ ಪ್ರಮುಖವಾದುವೆನ್ನಬಹುದು. ಕನ್ನಡ ನುಡಿ, ಸಾಹಿತ್ಯ ಪರಿಷತ್ಪತ್ರಿಕೆ, ಇಂಡಿಯನ್ ಆಂಟಕ್ವರಿ, ಕರ್ನಾಟಕ ಹಿಸ್ಟಾರಿಕಲ್ ರಿವ್ಯೂ, ಪ್ರಬುದ್ಧ ಕರ್ನಾಟಕ, ಜಯಕರ್ನಾಟಕ ಮೊದಲಾದ ನಿಯತಕಾಲಿಕ ಪತ್ರಿಕೆಗಳು ಈ ಕೆಲಸ ಮಾಡಿವೆ. ಡಾ.ಫ್ಲೀಟ್, ರೈಸ್, ಆರ್.ನರಸಿಂಹಚಾರ್, ಬಿ.ಎಂ.ಶ್ರೀ, ಮುಗಳಿ, ಆರ್.ಎಸ್.ಪಂಚಮುಖಿ, ಎಚ್, ಕೃಷ್ಣಶಾಸ್ತ್ರಿ, ಮರಿಯಪ್ಪಭಟ್ಟ, ಆಲೂರು ವೆಂಕಟರಾವ್, ಬಿ.ಶಿವಮೂರ್ತಿಶಾಸ್ತ್ರಿ, ಬಿ.ವೆಂಕೋಬರಾವ್, ಬೆಟಗೇರಿ ಕೃಷ್ಣಶರ್ಮ, ರಾ.ಹ. ದೇಶಪಾಂಡೆ, ನರಸಿಂಹಶಾಸ್ತ್ರಿ, ಮಾಸ್ತಿವೆಂಕಟೇಶ ಅಯ್ಯಂಗಾರ್, ಡಾ.ತಿಪ್ಪೇರುದ್ರಸ್ವಾಮಿ, ಡಾ. ಎಂ.ಚಿದಾನಂದಮೂರ್ತಿ ಮೊದಲಾದ ಅನೇಕ ವಿದ್ವಾಂಸರು ಗ್ರಂಥಕರ್ತರು ಹೆಸರುಗಳನ್ನು ನೆನೆಯಬಹುದು.

ಕನ್ನಡ ಸಂಸ್ಕೃತಿ– ಅ.ಪ. ಕರಮರಕರ್, ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ – ಅ.ನ.ಕೃ. ಕರ್ನಾಟಕ ಜನ ಜೀವನ– ಬೇಟಗೇರಿ ಕೃಷ್ಣಶರ್ಮ, ಪಟ್ಟದಕಲ್ಲು ಗುಡಿಗಳು – ಅಣ್ಣಿಗೇರಿ, ಮೂಲ ಸಂಸ್ಕೃತಿ ಕರ್ನಾಟಕ ಸಂಸ್ಕೃತಿ – ದೇವುಡು, ಸಾಹಿತ್ಯ ಶಕ್ತಿ, ಸಂಸ್ಕೃತಿ – ಡಿ.ವಿ ಗುಂಡಪ್ಪ, ಕರ್ನಾಟಕ ಜನತೆಯ ಸಂಸ್ಕೃತಿ – ಮಾಸ್ತಿ ವೆಂಕಟೇಶ ಅಯ್ಯಂಗಾರ, ಕರ್ನಾಟಕ ಸಂಸ್ಕೃತಿ ಸಮೀಕ್ಷೆ – ಎಚ್ ತಿಪ್ಪೇರುದ್ರಸ್ವಾಮಿ, ಕರ್ನಾಟಕ ಸಂಸ್ಕೃತಿಯ ಪೂರ್ವ ಪೀಠಿಕೆ ಭಾಗ–1, 2 ಭಾಷೆ ಮತ್ತು ಸಂಸ್ಕೃತಿ – ಶಂ.ಬಾ ಜೋಶಿ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಕರ್ನಾಟಕ ಸಂಸ್ಕೃತಿ, ಕನ್ನಡ ಸಂಸ್ಕೃತಿ – ಡಾ.ಎಂ.ಚಿದಾನಂದಮೂರ್ತಿ, ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ದರ್ಶನ – ಎಸ್.ಎಸ್. ಮಾಳವಾಡ, ಹರಪ್ಪ ಸಂಸ್ಕೃತಿ – ಎಂ.ಶೇಷಾದ್ರಿ, ಕನ್ನಡ ಸಂಸ್ಕೃತಿ – ಎಂ. ಮರಿಯಪ್ಪಭಟ್ಟ, ಕರ್ನಾಟಕ ಇತಿಹಾಸ, ಹರಿದಾಸ ಸಾಹಿತ್ಯ – ರಾ.ಸ್ವಾ. ಪಂಚಮುಖಿ ಭಾರತೀಯ ಸಂಸ್ಕೃತಿ, ಹೊಯ್ಸಳ ವಾಸ್ತುಶಿಲ್ಪ – ಎಸ್. ಶ್ರೀಕಂಠಶಾಸ್ತ್ರಿ, ಕರ್ನಾಟಕ ಪೂರ್ವ ಚರಿತ್ರೆ, ಎಲ್ಲೋರ – ಅಜಂತ – ಎಂ. ಎಚ್. ಕೃಷ್ಣ, ಕನ್ನಡ ಸಾಹಿತ್ಯ ಚರಿತ್ರೆ – ರಂ .ಶ್ರೀ. ಮುಗಳಿ, ಕರ್ನಾಟಕ ಭಕ್ತ ವಿಜಯ ಬೇಲೂರು ಕೇಶವದಾಸರು, ಕರ್ನಾಟಕ ಇತಿಹಾಸ ದರ್ಶನ – ಎಂ.ವಿ ಕೃಷ್ಣರಾವ್ ಮತ್ತು ಎಂ. ಕೇಶವಭಟ್, ಕರ್ನಾಟಕದ ಗತವೈಭವ –ಆಲೂರ ವೆಂಕಟರಾವ್ ಇತ್ಯಾದಿ ಕನ್ನಡ ಸಾಹಿತ್ಯದಲ್ಲಿ ಕರ್ನಾಟಕ ಸಂಸ್ಕೃತಿಯ ಬೆಳವಣಿಗೆಯನ್ನು ಕಾಣುತ್ತೇವೆ.

ಕರ್ನಾಟಕ ಸಂಸ್ಕೃತಿ ಎಂಬ ಬಿಡಿ ಬಿಡಿ ಲೇಖನಗಳಲ್ಲಿ ಸ್ಮಾರಕ ಸಂಭಾವನಾ ಗ್ರಂಥಗಳಲ್ಲೂ ಕಾಣುತ್ತೆವೆ. 'ಕರ್ನಾಟಕ ದರ್ಶನ' 'ವಿಜಯನಗರ ಷಟ್ ಶತಮಾನೋತ್ಸವ ಸ್ಮಾರಕ ಗ್ರಂಥ', ಇಂಗ್ಲಿಷ್‌ನಲ್ಲಿ ಪ್ರಕಟವಾಗಿರುವ 'ಕರ್ನಾಟಕ ಥ್ರೂ ದಿ ಏಜಸ್' ಎಂಬ ಗ್ರಂಥಗಳಲ್ಲಿ ಕಾಣುತ್ತೆವೆ. ಕರ್ನಾಟಕದ ರಾಜಕೀಯ ಇತಿಹಾಸದೊಂದಿಗೆ ಸಂಸ್ಕೃತಿ ಚರಿತ್ರೆಯೂ ಅಲ್ಲಿ ವಿಸ್ತಾರವಾಗಿಯೇ ಅನೇಕ ಪ್ರಸಿದ್ಧ ಲೇಖಕರಿಂದ ಮೂಡಿ ಬಂದಿದೆ.

ಹತ್ತನೆಯ ಶತಮಾನದವರೆಗಿನ ಕರ್ನಾಟಕ ಅರಸು ಮನೆತನಗಳು ಮತ್ತು ಅವರ ಸಾಧನೆಯನ್ನು ಆ ಕಾಲದ ಶಾಸನಗಳ ಆಧಾರದಿಂದ ನಿರೂಪಿಸುವ ಮತ್ತೊಂದು ಗ್ರಂಥ ಶ್ರೀ.ಆರ್.ಎಸ್. ಪಂಚಮುಖಿಯವರ 'ಕರ್ನಾಟಕ ಇತಿಹಾಸ ಭಾಗ 1,2 ರಲ್ಲಿ ರಾಜಕೀಯ ಸಾಧನೆ, ಸಾಂಸ್ಕೃತಿಕ ಸಾಧನೆಯನ್ನು ವ್ಯಕ್ತಪಡಿಸಿದ್ದಾರೆ. ಇಂತಹ ವಿಷಯಕ್ಕೆ ಸಂಬಂಧಿಸಿದಂತೆ ಅನೇಕ ಗ್ರಂಥಗಳನ್ನು ರಚಿಸಿದ್ದಾರೆ. ಹರಿದಾಸ ಸಾಹಿತ್ಯವನ್ನು ಕುರಿತು ರಚಿಸಿದ್ದಾರೆ. ಕರ್ನಾಟಕ ಅರಸು ಮನೆತನಗಳು, ಕರ್ನಾಟಕ ಶಾಸನಗಳು, ಕೊಲ್ಹಾಪುರದ ಕನ್ನಡ ಶಾಸನಗಳು, ವಾಸ್ತುಶಿಲ್ಪ ಮುಂತಾದ ಗ್ರಂಥಗಳು ಮತ್ತು ಬಿಡಿಲೇಖನಗಳನ್ನು ರಚಿಸಿದ್ದಾರೆ. 'ಕರ್ನಾಟಕ ಸಂಸ್ಕೃತಿ ಸಮೀಕ್ಷೆ' ಡಾ. ಎಚ್.ತಿಪ್ಪೇರುದ್ರಸ್ವಾಮಿಯವರು ಬರೆದ ಗ್ರಂಥಕ್ಕೆ ಭಾರತ ಸರಕಾರದ ಅಕಾಡೆಮಿ ಪ್ರಶಸ್ತಿಯೂ ದೊರಕಿದೆ. ಈ ಕೃತಿಯಲ್ಲಿ ಕರ್ನಾಟಕದ ರಾಜಕೀಯ ಮತ್ತು ಸಾಂಸ್ಕೃತಿಕ ಸಾಧನೆಗಳನ್ನು ವಿವರವಾಗಿ ವ್ಯಕ್ತಪಡಿಸಿದ್ದಾರೆ. ಕನ್ನಡ ಶಾಸನಗಳಲ್ಲಿ, ಕಾವ್ಯಗಳಲ್ಲಿ ಶರಣರ ವಚನಗಳಲ್ಲಿ, ಹರಿದಾಸರ ಕೀರ್ತನೆಗಳಲ್ಲಿ ಜಾನಪದ ಗೀತೆಗಳಲ್ಲಿ ಕಂಡು ಬರುವ ಕನ್ನಡ ನಾಡಿನ – ಕನ್ನಡಿಗರ ಸಂಸ್ಕೃತಿಯ ಚರಿತ್ರೆಯನ್ನು, ಸ್ವರೂಪವನ್ನು ವಿಶ್ಲೇಷಿಸಲಾಗಿದೆ. ಅಲ್ಲದೆ ಕರ್ನಾಟಕ ವಾಸ್ತುಶಿಲ್ಪ–ಸಂಗೀತ, ನೃತ್ಯ, ಚಿತ್ರಕಲೆಗಳ ಕ್ಷೇತ್ರಗಳ ಸಾಧನೆಗಳ ಬಗೆಗೂ ವಿವರಿಸಿದ್ದಾರೆ. ಹೀಗೆ ಕರ್ನಾಟಕ ಸಂಸ್ಕೃತಿಯ ವಿವಿಧ ಮುಖಗಳನ್ನು ಹಿರಿಯ ಸಾಧನೆಯನ್ನು ಚಿತ್ರಿಸುವ ಉಪಯುಕ್ತ ಗ್ರಂಥವಾಗಿದೆ.

ಕನ್ನಡ ನಾಡಿನ ಶಾಸನಗಳಲ್ಲಿ ಅಡಗಿರುವ 'ಕರ್ನಾಟಕ ಸಂಸ್ಕೃತಿಯ ಅಧ್ಯಯನವನ್ನು ವಿದ್ವತ್ಪೂರ್ಣವಾಗಿ ಮಾಡಿದವರು ಡಾ.ಎಂ.ಚಿದಾನಂದಮೂರ್ತಿ. ಕ್ರಿ.ಶ, 450 ರಿಂದ 1150ರ ವರೆಗಿನ ಅವಧಿಯ ಶಾಸನಗಳನ್ನು ವಿಶೇಷ ರೀತಿಯ ಅಧ್ಯಯನಕ್ಕಾಗಿ ಆರಿಸಿಕೊಂಡು, ಪ್ರಮಾಣಿಕ ರೀತಿಯಲ್ಲಿ ಹೊರತೆಗೆದು ವಿಂಗಡಿಸಿ ಕನ್ನಡ ಸಂಸ್ಕೃತಿ ವ್ಯಾಸಂಗಕ್ಕಾಗಿ ಹಿರಿಯ ಕಾಣಿಕೆಯನ್ನು ಅವರು ನೀಡಿದ್ದಾರೆ. 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ಎಂಬ ಗ್ರಂಥರೂಪದಲ್ಲಿ ಮತ, ಧರ್ಮ, ಆಡಳಿತ ವ್ಯವಸ್ಥೆ, ಆರ್ಥಿಕ ಸ್ಥಿತಿ, ಯುದ್ಧ ವಿವಿಧತೆಗಳು ಸಾಮಾಜಿಕ ಸ್ಥಿತಿ–ಗತಿಗಳು ಮುಂತಾದ ಸಂಸ್ಕೃತಿಯ ಹಲವು ಮುಖದ ಪರಿಚಯ ತಮ್ಮ ಗ್ರಂಥದಲ್ಲಿ ವಿವರಿಸಿದ್ದಾರೆ. ಶಾಸನಗಳು ಸಂಸ್ಕೃತಿಯ ವ್ಯಾಸಂಗಕ್ಕಾಗಿ ಅದೆಷ್ಟು ಉಪಯುಕ್ತವಾದ ಮಾಹಿತಿಯನ್ನು ಕಾಣುತ್ತೇವೆ. ಶಾಸನಗಳ ಅಧ್ಯಯನದಿಂದ ಇತಿಹಾಸ ಸಂಸ್ಕೃತಿಗಳ ಚಿತ್ರ ಹೇಗೆ ಮೂಡಿಬರಬಲ್ಲುದು ಎಂಬುದು ಇದರಿಂದ ವ್ಯಕ್ತವಾಗುತ್ತದೆ. ವಿಷಯ ಸಂಗ್ರಹ, ಶಾಸ್ತ್ರ ದೃಷ್ಟಿ, ತೂಕಬದ್ಧವಾದ ನಿರ್ಣಯಗಳು ಈ ಗ್ರಂಥದ ವೈಶಿಷ್ಟ್ಯವಾಗಿದೆ.

ಹೀಗೆ ಕನ್ನಡ ಸಾಹಿತ್ಯದಲ್ಲಿ 'ಕರ್ನಾಟಕ ಸಂಸ್ಕೃತಿಯ ಬೆಳವಣಿಗೆಯನ್ನು ಗ್ರಂಥರೂಪಗಳಲ್ಲದೆ, ಬಿಡಿ ಬಿಡಿ ಲೇಖನಗಳಲ್ಲಿ, ಸ್ಮಾರಕ ಸಂಭಾವನಾ ಗ್ರಂಥಗಳಲ್ಲಿ, ಪತ್ರಿಕೆಗಳಲ್ಲಿ, ಸಂಚಿಕೆಗಳಲ್ಲಿ, ಕರ್ನಾಟಕ ಸಂಸ್ಕೃತಿಯನ್ನು ವಿವಿಧ ಮುಖಗಳಲ್ಲಿ ಇಂದು ಕಾಣುತ್ತೆವೆ.

**ಪರಾಮರ್ಶನ ಗ್ರಂಥಗಳು**


- ಚಿದಾನಂದಮೂರ್ತಿ, ಎಂ. (1991). *ಕನ್ನಡ ಸಂಸ್ಕೃತಿ.* ಕನ್ನಡ ಸಾಹಿತ್ಯ ಪರಿಷತ್.
- ದೇಜಗೌ. (2007). *ಕುವೆಂಪು ದರ್ಶನ –1.* ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ.
- ಕಲಬುರ್ಗಿ, ಎಂ.ಎಂ. (2004). *ಮಾರ್ಗ–3. 4 ಸಂಪುಟಗಳು.* ಸಪ್ನ ಬುಕ್ ಹೌಸ್
- ಮುಗಳಿ, ರಂ.ಶ್ರೀ. (2000). *ಕನ್ನಡ ಸಾಹಿತ್ಯ ಚರಿತ್ರೆ.* (ತೃತೀಯಾ ಮುದ್ರಣ). ಸಮಾಜ ಪುಸ್ತಕಾಲಯ.
- ಸತ್ಯಾನಂದ ಪಾತ್ರೋಟಿ (ಸಂ.) (2000). ಕೃಷ್ಣ ಪ್ರಭೆ, ಕನ್ನಡ ಸಾಹಿತ್ಯ ಪರಿಷತ್.